OS 152/2024
PW-1

ದಿನಾಂಕಃ 22-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಬಿ ಆರ್ ವಕೀಲರಿಂದ**

1. ನಾನು ಸರ್ವೆ ನಂ 12/5ಬಿ ಆಸ್ತಿಯ ವಿಚಾರವಾಗಿ ಒತ್ತುವರಿಯಾಗಿದೆ ಎಂದು ಈ ದಾವೆ ಹೂಡಿರುತ್ತೇನೆ. ಒತ್ತುವರಿ ಆಗಿದೆ ಎನ್ನುವುದನ್ನು ತೋರಿಸಲು ನಾನು ಭೂಮಾಪನ ಇಲಾಖೆಗೆ ಅರ್ಜಿಯನ್ನು ದಾಖಲಿಸಿರುತ್ತೇನೆ. ಸದರಿ ಅರ್ಜಿಯ ಮೇರೆಗೆ ದಿಃ24-01-2024ರಂದು ಸರ್ವೆಯರ್ ರವರು ಬಂದು ಸದರಿ ಆಸ್ತಿಯನ್ನು ಸರ್ವೆ ಮಾಡಿರುತ್ತಾರೆ. ಸದರಿ ಸರ್ವೆ ಮಾಡುವ ಪೂರ್ವ ಆಜುಬಾಜುದಾರರಿಗೆ ನೋಟಿಸನ್ನು ಕೊಟ್ಟಿರುತ್ತಾರೆ. ಸರ್ವೆ ಮಾಡುವ ಸಮಯಕ್ಕೆ ಭೂಮಾಪಕರು ಮತ್ತು ಅವರ ಸಹಾಯಕರು ಮತ್ತು 2 ನೇ ಪ್ರತಿವಾದಿ ಹಾಜರಿದ್ದರು. ಸದರಿ ದಿನದಂದು ನನ್ನ ಹೇಳಿಕೆಯನ್ನು ಭೂಮಾಪಕರು ನಿಪಿ-6ರಂತೆ ಪಡೆದಿರುತ್ತಾರೆ. ನಿಪಿ-6ರಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿದೆ. ಅದರಲ್ಲಿರುವ ಸಹಿ ನನ್ನದೆ. ನಿಪಿ-7ನ್ನು ಅಳತೆ ಪೂರ್ಣಗೊಳಿಸಿದ 15 ದಿನಗಳ ತರುವಾಯ ನನಗೆ ಕೊಟ್ಟಿರುತ್ತಾರೆ.

2. ದಿಃ24-01-2024ರಂದು ನಾನು ಹೇಳಿದಂತೆ ಯಾವುದೇ ಅಳತೆ ಕಾರ್ಯ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-6ರಲ್ಲಿ ಸದರಿ ದಿನಾಂಕದಂದು ನೀರು ಕಾರ್ಯ ನಿರ್ವಹಿಸಲು ವಿವಾದಿತ ಜಮೀನಿನಲ್ಲಿ ಅರ್ಜಿದಾರರಾದ ನಾವು ಮತ್ತು ಬಾಜುದಾರರು ಹೊಲಕ್ಕೆ ನೀರು ಹಾಯಿಸಿದ್ದರಿಂದ ಅಳತೆ ಕಾರ್ಯ ನಿರ್ವಹಿಸಲು ಸಾಧ್ಯವಾಗಿರವುದಿಲ್ಲ ಎಂದು ತಿಳಿಸಿ ಅಳತೆ ದಿನಾಂಕವನ್ನು ದಿಃ02-02-2024 ಕ್ಕೆ ಮುಂದೂಡಿರುತ್ತಾರೆ ಎಂದು ನಮೂದು ಇದೆ ಎಂದರೆ ಸರಿ. ಅದರಂತೆ ದಿಃ 02-02-2024ರಂದು ಅಳತೆ ಕಾರ್ಯವನ್ನು ಮಾಡಲು ಬಾಜುದಾರರಿಗೆ ನೋಟಿಸು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಅದರಂತೆ ನಿಪಿ-6ರಲ್ಲಿ ದಿಃ 02-02-2024ರಂದು ಅಳತೆ ಕಾರ್ಯ ಪೂರೈಸಿರುತ್ತೇವೆ ಎಂದು ಭೂಮಾಪಕರು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಎಲ್ಲಾ ಸಂಗತಿಗಳನ್ನು ಓದಿ ತಿಳಿದ ತರುವಾಯ ನಿಪಿ-6ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ ನಾನು 24-01-2024 ರಂದು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

3. ನಿಪಿ-7 ನ್ನು ಅಳತೆ ಕಾರ್ಯ ನಡೆದ 20 ದಿನಗಳ ತರುವಾಯ ತಯಾರಿಸಿರುತ್ತಾರೆ. ಭೂಮಾಪಕರು ನಿಪಿ-7ನ್ನು ದಿಃ 24-01-2024ರಂದೇ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಹಾಗಾಗಿ ನಾನು ಹೇಳಿಂತೆ ನಿಪಿ-5 ಮತ್ತು 6ರಲ್ಲಿ ಉಲ್ಲೇಖಿತವಾದ ದಿನಾಂಕವಾದ 24-01-2024 ರಂದು ನಾನು ಹೇಳಿದಂತೆ ಯಾವುದೇ ಅಳತೆ ಕಾರ್ಯ ಆಗಿಲ್ಲ ಎಂದರೆ ಸರಿಯಲ್ಲ. ಸದರಿ

ಸರ್ವಯರ್ ರವರನ್ನು ಸಾಕ್ಷಿದಾರರಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನು ತೊಂದರೆಯಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.